aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Kannada First Language (Paper 4)

EXAM	YEAR	TYPE	SUBJECT
Karnataka Class 10	2027	Sample Paper	Kannada

01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 4

S.S.L.C. MODEL QUESTION PAPER - 4 : 2026 - 27

ವಿಷಯ : ಪ್ರಥಮ ಭಾಷೆ – **ಕನ್ನಡ**

Subject : First Language — KANNADA

ವಿಷಯ ಸಂಕೇತ : 01-K **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks : 100

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[Turn over

01-K

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳಿವು

(ಎ) ಕಚಟತಪ

(ಬಿ) ಅಇಉಎಒ

(ಸಿ) ಆಈಊಏಓ

(ಡಿ) ಯರವಷಸ

2. ಅನುನಾಸಿಕ ಸಂಧಿಗೆ ಸೇರಿದ ಪದ

(ಎ) ಅತ್ಯಂತ

(ಬಿ) ಸನ್ಮಾನ

(ಸಿ) ವಾಗ್ದೇವಿ

(ಡಿ) ನೀರ್ವನಿ

3. ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ

(ಎ) ಪೂರ್ಣವಿರಾಮ

(ಬಿ) ಪ್ರಶ್ನಾರ್ಥಕ

(ಸಿ) ಅರ್ಧವಿರಾಮ

(ಡಿ) ಭಾವಸೂಚಕ

4. ನಿಷೇಧಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆ

(ಎ) ತಿನ್ನಲಿ

(ಬಿ) ತಿಂದಾನು

(ಸಿ) ತಿನ್ನನು

(ಡಿ) ತಿಂದನು

5. ಹಳಗನ್ನಡ ಸಪ್ತಮೀ ವಿಭಕ್ತಿಯ ಪ್ರತ್ಯಯ

(ಎ) ಅತ್ತಣಿಂ

(ಬಿ) ಒಳ್

(ಸಿ) ಇಂ

(ಡಿ) ಅಂ

6. ಅಂಶಿಸಮಾಸಕ್ಕೆ ಸೇರಿದ ಪದವಿದು

(ಎ) ಮುಕ್ಕಣ್ಣ

(ಬಿ) ಪಾರ್ಥಭೀಮರು

(ಸಿ) ಹಿಂದಲೆ

(ಡಿ) ಬೆಟ್ಟದಾವರೆ

01-K

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 X 1 = 4**

7. ಕೋಕಿಲಾ : ಕೋಗಿಲೆ : : ವಂಧ್ಯಾ : ..... .
8. ಸಹದೇವ : ಅಂಕಿತನಾಮ : : ನದಿ : ..... .
9. ಧಗಧಗ : ಅನುಕರಣಾವ್ಯಯ : : ಅದುವೇ : ..... .
10. ಬಾಳುವ : ಕೃದಂತನಾಮ : : ಬಾಳುವಿಕೆ : ..... .

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **7 X 1 = 7**

11. ಭಾಷೆ ಯಾವುದಕ್ಕೆ ಸಾಧನವಾಗಿದೆ?
12. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?
13. ಲೇಖಕರು ವರ್ಣಿಸಿದ ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?
14. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು?
15. ಹೆಬಲಕ್ ಸಾಹೇಬನನ್ನು ಗುಂಡಿಕ್ಕಿ ಕೊಂದವರು ಯಾರು?
16. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?
17. ಇಳೆಯು ಹೇಗೆ ಸಂಭ್ರಮಿಸುತ್ತಿದೆ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **10 X 2 = 20**

18. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹೊಸರೂಪ ಪಡೆದ ಪ್ರಜಾಪ್ರತಿನಿಧಿ ಸಭೆಯನ್ನು ಕುರಿತು ಬರೆಯಿರಿ.
20. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ಹಲಗಲಿಗೆ ದಂಡು ಬರಲು ಕಾರಣವೇನು?
24. ಜಲಿಯನ್ ವಾಲಾಬಾಗ್ ಮಣ್ಣನ್ನು ಕುರಿತು ಭಗತ್‌ಸಿಂಗ್ ತನ್ನ ತಂಗಿಗೆ ಹೇಳಿದ ಮಾತುಗಳಾವುವು?
25. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವನ್ನು ತಿಳಿಸಿ.
26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?
27. ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನಿರ್ಧರಿಸಿದ ಪೈಗಳು ಪ್ರಾಸವನ್ನು ಇಟ್ಟೇ ಬರೆಯಲು ಕಾರಣವೇನು?

V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **2 X 3 = 6**

28. ಸಾರಾ ಅಬೂಬಕ್ಕರ್
29. ಪಂಪ

[Turn over

01-K

VI. **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1 X 3 = 3**

30. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ

VII. **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 X 3 = 3**

31. "ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು"

VIII. **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** **1 X 3 = 3**

32. ತಾಳಿದವನು ಬಾಳಿಯಾನು.

ಅಥವಾ

ಆರೋಗ್ಯವೇ ಭಾಗ್ಯ.

IX. **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** **6 X 3 = 18**

33. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"

34. "ಗಾಂಧೀಜಿ ಅವರು ಮೈಸೂರಿನ ಆಡಳಿತ ರೀತಿಯನ್ನು ಮುಕ್ತಕಂಠದಿಂದ ಹೊಗಳಿದರು."

35. "ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು"

36. "ಬಲ್ಲರು ಯಾರಾ ಹಾಕಿದ ಹೊಂಚ"

37. "ಅಹಿತರೊಳ್ ಸಂಧಿಯನೇಂ ಸಮಕೊಳಿಸಲೆಂದು ಬಂದೆನೆ"

38. "ಗಿಳಿಯೆದೆಬಣ್ಣದನೋಟ"

X. **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 X 4 = 4**

39. ಕೊರಳ ಸೆರೆ ಹಿಗ್ಗಿದವು ದೃಗುಜಲ

.....

.....

.....

.....

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ

.....

.....

.....

.....

ವೀರರೈವರ ನೋಯಿಸೆನು ರಾಜೀವಸಖನಾಣೆ

01-K

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4

40. ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8

41. 'ತಾಳಿದವನು ಬಾಳಿಯಾನು' ಎಂಬ ಮಾತು ಶಬರಿಯ ಪಾಲಿಗೆ ನಿಜವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಾಧಾನ ಪಡಿಸಿಕೊಂಡ ಬಗೆಯನ್ನು ಬರೆಯಿರಿ.

42. ಲವನ ಬಾಲಸಹಜ ಸಾಹಸ ಪ್ರವೃತ್ತಿ 'ವೀರಲವ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

ಅಥವಾ

ಲವನು ದಿಟ್ಟತನದಿಂದ ಕುದುರೆಯನ್ನು ಕಟ್ಟಿಹಾಕಿ ವೀರತನದಿಂದ ಯುದ್ಧಕ್ಕೆ ಸಿದ್ಧನಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 X 4 = 4 (2+2)

43. ನಿರ್ಜನವಾಗಿ ಭಣಗಟ್ಟುವ ಹಾಳು ಮಂಟಪಗಳು, ಭಗ್ನವಾದ ವಿಗ್ರಹ ರಾಶಿಗಳು, ಸುಮಾರು ೩೦೦ ವರ್ಷಗಳು ವಿಶ್ವವಿಖ್ಯಾತವಾಗಿ ಬಾಳಿ ಬದುಕಿದ ವಿಜಯನಗರ ಸಾಮ್ರಾಜ್ಯವಿಂದು ಕೇವಲ ಮಸಣ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ರಾಜ್ಯಲಕ್ಷ್ಮಿ ಮರೆಯಾಯಿತು. ವಿಜಯನಗರಕ್ಕೆ ಈ ವೈದವ್ಯ ಬಂದು ಐವತ್ತು ವರ್ಷಗಳಾಯಿತು ಎಂದುಕೊಂಡನು ಎಚ್ಚಮ್ಮ ನಾಯಕ. ಇವನೀಗ ಪಂಪಾಕ್ಷೇತ್ರದ ದರ್ಶನಕ್ಕಾಗಿ ಬಂದು ಹಾಳು ನಗರದ ನಡುವೆ ಹುಚ್ಚನಂತೆ ತಿರುಗಾಡುತ್ತಿದ್ದನು. ತಾಳಿಕೋಟೆಯ ದುರಂತ ಮುಗಿದ ನಂತರ ಶತ್ರುಗಳು ರಾಜಧಾನಿಯ ಕಡೆಗೆ ನುಗ್ಗಿದರು. ತಿರುಮಲ ರಾಯನು ಅವಸರದಲ್ಲಿ ವಿಜಯನಗರವನ್ನು ಬಿಡಬೇಕಾಯಿತು. ಮುಸಲ್ಮಾನರ ಕೈಗೆ ಸಿಕ್ಕದಂತೆ ಎಲ್ಲಾ ಸಂಪತ್ತನ್ನು ಸಾಗಿಸಲಾಗಲಿಲ್ಲ. ಕೇವಲ ೧೫೫೦ ಆನೆಗಳ ಮೇಲೆ ಹೇರಬಹುದಾದಷ್ಟು ಸಂಪತ್ತನ್ನು ಮಾತ್ರ ಪೆನುಗೊಂಡೆಗೆ ಸಾಗಿಸಿದ್ದನು. ವಿಜಯನಗರದಲ್ಲಿ ಇನ್ನೆಷ್ಟು ಐಶ್ವರ್ಯ ಇದ್ದಿರಬಹುದು ಎಂದು ತರುಣ ವೀರ ಎಚ್ಚಮ್ಮನಾಯಕ ಕಲ್ಲು ಬಂಡೆಯ ಮೇಲೆ ಕುಳಿತು ಯೋಚಿಸುತ್ತ ನಿಟ್ಟುಸಿರು ಬಿಟ್ಟನು. ಎಚ್ಚಮನ ತಂದೆ ಪ್ರತಾಪದುರ್ಗದ ಮಂಡಲಾಧಿಪತಿ ಆಗಿದ್ದನು. ಅರಸನ ಬಲಗೈ ಬಂಟ ಸ್ವಾಮಿನಿಷ್ಠ ಎನಿಸಿಕೊಂಡಿದ್ದನು. ತನ್ನ ಮಗನು ನನ್ನಂತೆ ಆಗಬೇಕೆಂದು ಬಯಸಿ, ಸಾಯುವ ಮುನ್ನ ಎಚ್ಚಮ್ಮನನ್ನು ಕರೆದು, "ಮಗನೆ, ವಿಜಯನಗರ ರಾಜಧಾನಿಗೆ ಹೋಗಿ ಪಂಪಾಧೀಶ, ವಿರೂಪಾಕ್ಷನ ದರ್ಶನ ಮಾಡಿ ಬಾ. ಇದರಿಂದ ನಿನ್ನ ತಿಳಿವಳಿಕೆ ಹೆಚ್ಚುತ್ತದೆ. ನಿನ್ನ ಜೀವನಕ್ಕೆ ಪ್ರೇರಣೆ ಸಿಗುತ್ತದೆ. ಅಷ್ಟು ದೊಡ್ಡ ಸಾಮ್ರಾಜ್ಯವನ್ನು ಆಳಿ ಈಗ ಈ ಹೀನಸ್ಥಿತಿಗೆ ಬಂದಿರುವ ರಾಜವಂಶದ ಬಗ್ಗೆ ನಿನ್ನ ನಿಷ್ಠೆ

[Turn over

01-K

ಹೆಚ್ಚಾಗಿ ಅದರ ಉಳಿವಿಗಾಗಿ ನಿನ್ನ ಬಾಳನ್ನು ಮೀಸಲಿಡಬೇಕೆನಿಸುತ್ತದೆ. ಇದರಿಂದ ಹಿಂದಿನ ವೈಭವದ ದಿನಗಳು ಮರುಕಳಿಸಬಹುದು" ಎಂದನು. ಎಚ್ಚಮನಾಯಕ ಹಾಳು ಹಂಪೆಯಲ್ಲಿ ದಿನವೆಲ್ಲ ತಿರುಗಿದನು. ವಿಜಯನಗರದ ವೈಭವವನ್ನು ನುಚ್ಚುನೂರು ಮಾಡಿದ ಮಾನವ ಮೃಗಗಳನ್ನು ನೆನೆದು ಹೃದಯ ಕುದಿಯಿತು. ವಿರೂಪಾಕ್ಷನ ದರ್ಶನ ಪಡೆದು ಕುದುರೆ ಹತ್ತಿ ಪ್ರತಾಪದುರ್ಗಕ್ಕೆ ಬಂದನು.

ಪ್ರಶ್ನೆಗಳು :

ಅ. ಎಚ್ಚಮ್ಮನಾಯಕನಿಗೆ ತಂದೆ ಹೇಳಿದ ಮಾತುಗಳನ್ನು ತಿಳಿಸಿ

ಆ. ಕಲ್ಲು ಬಂಡೆಯ ಮೇಲೆ ಕುಳಿತ ಎಚ್ಚಮ್ಮನಾಯಕ ನಿಟ್ಟುಸಿರು ಬಿಡಲು ಕಾರಣವೇನು?

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5

44. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಹರ್ಷಿತಾ' ಎಂದು ಭಾವಿಸಿಕೊಂಡು, ಶಾಲಾ ವೇಳೆಗೆ ತಲುಪಲು ಅನುಕೂಲವಾಗುವಂತೆ ಬಸ್ಸಿನ ಸೌಕರ್ಯವನ್ನು ಮಾಡಿಕೊಡುವಂತೆ ಕೋರಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಪ್ರದೀಪ' ಎಂದು ಭಾವಿಸಿಕೊಂಡು, ನಿಮ್ಮ ಶೈಕ್ಷಣಿಕ ಪ್ರಗತಿಯನ್ನು ವಿವರಿಸಿ ಹುಬ್ಬಳ್ಳಿಯ ಗೋಕುಲ ಬಡಾವಣೆಯಲ್ಲಿ ವಾಸವಾಗಿರುವ 'ಚಂದ್ರಶೇಖರ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ.

ಅಥವಾ

ಕೌಶಲ್ಯ ಆಧಾರಿತ ಶಿಕ್ಷಣದ ಮಹತ್ತ್ವ.